ದಿನಾಂಕ: ಫೆಬ್ರವರಿ 24, 2014

# ಎನ್‌ಡಿಎ ಮತ್ತು ಕಡೆಯ ಮೈಲಿಗಲ್ಲು

–ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

2014ರ ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿದ್ದಂತೆ, ರಾಜಕೀಯ ಊಹಾಪೋಹಗಳ ಸಂವತ್ಸರ ಆರಂಭವಾದಂತೆ. ದೆಹಲಿಯ ಪ್ರಜ್ಞಾವಂತರು, ಯಾವುದೇ ಸರ್ವೇಕ್ಷಣೆಯ ಆಧಾರವೂ ಇಲ್ಲದೆ, ಕೇವಲ ವ್ಯಯಕ್ತಿಕ ವಿಶ್ಲೇಷಣೆ ಅಥವಾ ಚುನಾವಣಾ ನಿರೂಪಕರ ಅನಿಸಿಕೆಗಳನ್ನು ಆಧರಿಸಿ ತಮ್ಮ ಅಭಿಪ್ರಾಯ ನೀಡುತ್ತಿದ್ದಾರೆ. ಭಾಜಪ ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ನರೇಂದ್ರ ಮೋದಿ ಅವರ ಹೆಸರನ್ನು ಸೆಪ್ಟಂಬರ್ 13,2013ರಂದು ಪ್ರಕಟಿಸುವವರೆಗೂ, 'ಪಕ್ಷ ಒಬ್ಬ ವ್ಯಕ್ತಿಯನ್ನು ನೇಮಿಸಬಹುದೆ' ಎಂಬ ಸಂದೇಹ ಮೂಡಿತ್ತು. ಜೊತೆಗೆ, ಆಡಳಿತ ವೈಫಲ್ಯ ಮತ್ತು ಸರ್ಕಾರದ ವಿರುದ್ಧದ ಬೇಸರ ಪ್ರಾಮುಖ್ಯತೆ ಪಡೆಯದೆ ಚುನಾವಣೆಯಲ್ಲಿ ವಿವಿಧ ಸಮೂಹಗಳು ಮತಗಳನ್ನು ವಿಭಜಿಸಲಿವೆ ಎಂದೂ ಸಹ ವಾದಿಸಲಾಗಿತ್ತು. ಮೋದಿ ಅವರ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುತ್ತಿರುವ ಜನರ ಭಾರಿ ಸಂಖ್ಯೆಯನ್ನು ನನ್ನ 25 ವರ್ಷಗಳ ರಾಜಕೀಯ ಜೀವನದಲ್ಲಿ ಎಂದೂ ಕಂಡಿರಲಿಲ್ಲ. 1989ರಿಂದ ಈವರೆಗೂ ನಮ್ಮ ಪಕ್ಷದ ಕಾರ್ಯಕರ್ತರಲ್ಲಿ ಈ ಮಟ್ಟಕ್ಕೆ ಹುಮ್ಮಸ್ಸು ಕಂಡಿರಲಿಲ್ಲ. ಭಾರತದ ರಾಜಕೀಯ ಕ್ಷಿತಜದಲ್ಲಿ ಅಟಲ್‌ಜೀ ಅವರನ್ನು ಬಹು ಯೋಗ್ಯ ಪ್ರಧಾನ ಮಂತ್ರಿಯೆಂದು ಮನಗಂಡ 1998 ಹಾಗೂ 1999 ಚುನಾವಣೆಗಳನ್ನು ಹೊರತು ಪಡಿಸಿದರೆ, ಈ ಬಗೆಯ ಹುಮ್ಮಸ್ಸು ಕಂಡುಬಂದಿರಲಿಲ್ಲ. ಚರ್ಚೆಯ ವಿಷಯ ಮತ್ತೊಂದು ಪ್ರಶ್ನೆಯಾಗಿ ಮಾರ್ಪಟ್ಟಿದೆ. ಭಾಜಪಗೆ ಯಾರು ಬೆಂಬಲ ನೀಡುತ್ತಾರೆ? ಬಲವಾದ ಬಿಜೆಪಿ ರೂಪುಗೊಂಡರೆ ಚುನಾವಣೆ ಪೂರ್ವ ಅಥವಾ ನಂತರ ಅದರ ಸಮರ್ಥನೆಗೆ ಹಲವಾರು ಪಕ್ಷಗಳು ನಿಲ್ಲುತ್ತವೆ ಎಂಬ ಆಂತರಿಕ ಲೆಖ್ಖಾಚಾರವನ್ನು ನಾವು ಹಾಕಿಕೊಂಡಿದ್ದೆವು.

ಸುದ್ದಿ ವಾಹಿನಿ ಎಬಿಪಿ ನ್ಯೂಸ್‌ಗೆ ಜನಾಭಿಪ್ರಾಯ ಸಂಗ್ರಹ ಸರ್ವೇಕ್ಷಣೆಯನ್ನು ಪ್ರತಿಷ್ಠಿತ ಸಂಸ್ಥೆ ಎಸಿ ನೀಲ್ಸನ್ ನಡೆಸಿಕೊಟ್ಟಿದೆ. ಅದರ ನಿಖರತೆಯನ್ನು ನಾನು ದೃಢಪಡಿಸಲಾರೆ. ಅವರ ಸರ್ವೇಕ್ಷಣೆಯ ದಿಕ್ಕು ಸರಿಯಿದ್ದರೆ, ಬರುವ ಚುನಾವಣೆಗಳು ದಿಕ್ಸೂಚಿಯಾಗಲಿವೆ.

ಸರ್ವೇಕ್ಷಣೆ ಏನು ಸೂಚಿಸುತ್ತವೆ. ಮೂರಂಕಿಯ ಬಲಾಬಲ ಗಳಿಸುವ ಕೇವಲ ಏಕೈಕ ಪಕ್ಷವಿರುತ್ತದೆ. ಅದರ ಬಲಾಬಲ 200ರ ಅಂಕಿಯನ್ನು ದಾಟುತ್ತದೆ. ಅದರ ಅಂಗ ಪಕ್ಷಗಳು ಸಹ ಸೀಟುಗಳನ್ನು ಗಳಿಸಲಿವೆ. ಭಾರತದ ಉತ್ತರ, ಕೇಂದ್ರ ಹಾಗೂ ಪಶ್ಚಿಮ ಭಾಗದಲ್ಲಿ ಭಾಜಪ ಪ್ರಾಬಲ್ಯ ಹೆಚ್ಚಲಿದೆ.

ದೇಶದ ಪೂರ್ವ ಮತ್ತು ದಕ್ಷಿಣದಲ್ಲಿರುವ ಬಿಹಾರ್ ಮತ್ತು ಕರ್ನಾಟಕದಲ್ಲಿ ಅದರ ಸಾಮರ್ಥ್ಯ ವೃದ್ಧಿಸಲಿದೆ. ಇನ್ನುಳಿದ ರಾಜ್ಯಗಳಲ್ಲಿ ಭಾಜಪ ಸಮತೋಲನ ಕಾಯ್ದುಕೊಳ್ಳಲಿದೆ. ಸಾಂಪ್ರದಾಯಿಕವಾಗಿ ಭಾಜಪ ಅಸ್ತಿತ್ವಯಿಲ್ಲದ ರಾಜ್ಯಗಳಲ್ಲಿ ವಿವಿಧ ರಾಜಕೀಯ ಶಕ್ತಿಗಳು ಮೋದಿ–ಭಾಜಪ ಜನಪ್ರಿಯತೆಯ ಲಾಭಗಳಿಸಬಹುದು. ಅನ್ಯ ಪಕ್ಷಗಳ ಒಪ್ಪಂದವಿಲ್ಲದೆಯು ಒಂದೆರಡು ಸೀಟುಗಳಲ್ಲಿ ಭಾಜಪ ಜಯಶಾಲಿಯಾಗಬಹುದು.

ಸರ್ಕಾರ ರಚಿಸುವ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದೆ. ಆದರೆ ಅವರಲ್ಲಿ ಅಗ್ರಪಂಕ್ತಿಯಲ್ಲಿರುವುದು ಭಾಜಪ ನೇತೃತ್ವದ ಎನ್‌ಡಿಎ ಒಕ್ಕೂಟ. ಕಾಂಗ್ರೆಸ್ ಪಕ್ಷದ ಬಲಾಬಲ ಎರಡಂಕಿಗೆ ಕ್ಷೀಣಿಸಿದರೆ, ಅದರ ವೈಫಲ್ಯ ಸ್ಪಷ್ಟವಾಗುತ್ತದೆ. ಯಾವುದೇ ಒಂದು ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯ ಪಾತ್ರ ವಹಿಸುವ ಶಕ್ತಿ ಅದಕ್ಕಿರುವುದಿಲ್ಲ. ತೃತೀಯ ರಂಗ ಮತ್ತು ಒಕ್ಕೂಟ ರಂಗಗಳು ವಿವಿಧ ಸಣ್ಣ ಪಕ್ಷಗಳನ್ನು ಕೂಡಿದ್ದು ಅವರಿಂದ ಕೇಂದ್ರದಲ್ಲಿ ಸರ್ಕಾರ ರಚಿಸುವುದು ವಿರಳ. ಯಾವುದೇ ಒಂದು ರಾಜ್ಯದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಬಲ್ಲ ರಾಜ್ಯಮಟ್ಟದ ಪಕ್ಷಗಳಿಲ್ಲ. ಹೀಗಿರುವಾಗ, ಮುಂದಾಳತ್ವ ವಹಿಸುವ ಪಕ್ಷಕ್ಕೆ ಹೆಚ್ಚಿನ ಆದ್ಯತೆ ಇರುತ್ತದೆ. ಆದ್ದರಿಂದ ಈಗ ಕೇಳಿಬರುತ್ತಿರುವ ಪ್ರಶ್ನೆಯೆಂದರೆ– ಕಡೆಯ ಮೈಲಿಗಲ್ಲನ್ನು ಭಾಜಪ ನೇತೃತ್ವದ ಎನ್‌ಡಿಎ ಹೇಗೆ ತಾನೆ ತಲುಪುತ್ತದೆ?

ಇದೊಂದು ಥಿಯೊರೆಟಿಕಲ್ ಲೆಖ್ಖಾಚಾರವಾಗಿದೆ. ರಾಜಕೀಯ ಪಂಡಿತರು ಅದನ್ನು ಚರ್ಚಿಸುತ್ತಾರೆ. ಆದರೆ ವಸ್ತುಸ್ಥಿತಿಯನ್ನು ಅವಲೋಕಿಸಿದರೆ, ಮೋದಿ ಸಾರ್ವಜನಿಕ ಸಭೆಗೆ ಆಗಮಿಸುತ್ತಿರುವ ಜನಸ್ತೋಮ, ಜನಸ್ಪಂದನ ವೀಕ್ಷಿಸಿದರೆ, ಚುನಾವಣಾ ತಜ್ಞರು ಊಹಿಸುತ್ತಿರುವ ಮತಗಳಿಗಿಂತ ಹೆಚ್ಚಿನ ಮತಗಳು ಭಾಜಪಗೆ ದೊರೆಯುವ ಎಲ್ಲಾ ಸೂಚನೆಗಳು ಗೋಚರಿಸುವುದು ಸಹಜ. ಯಾವ ದಿಕ್ಕಿನಲ್ಲಿ ಚಲಿಸಬೇಕು ಎಂದು ನಿರ್ಧರಿಸುವ ಕಾರ್ಯವನ್ನು ವಿವಿಧ ರಾಜ್ಯಗಳಲ್ಲಿರುವ ಸಣ್ಣ ಸಮೂಹಗಳು ನಿರ್ಧರಿಸಬೇಕಾಗುತ್ತದೆ. ಭಾಜಪ ಮತ್ತು ಅದರ ಅಂಗ ಪಕ್ಷಗಳ ಒಟ್ಟಾರೆ ಸಾಮರ್ಥ್ಯಕ್ಕೆ ಕಿರು ಕಾಣಿಕೆಯನ್ನು ನೀಡುವ ಪ್ರಯತ್ನವನ್ನು ಸಣ್ಣ ಸಮೂಹಗಳು ಮಾಡಬೇಕಾಗಿದೆ. ರಾಜ್ಯಗಳಲ್ಲಿ ದೊಡ್ಡ ಗಾತ್ರದ ಸಮೂಹಗಳು ಸಾಂಪ್ರದಾಯಿಕವಾಗಿ ಕಾಂಗ್ರೆಸ್ ಏತರ ರಾಜಕೀಯ ಸೂತ್ರವನ್ನು ಅನುಸರಿಸುತ್ತ ಬಂದಿವೆ. ಕೇಂದ್ರದಲ್ಲಿ ಕಾಂಗ್ರೆಸ್ ಸಮರ್ಥನೆ ಪಡೆಯುವ ಅಥವಾ ನೀಡುವ ಒಪ್ಪಂದ ದೀರ್ಘಾವಧಿಯ ವ್ಯವಸ್ಥೆಯಾಗಲಾರದು. ಈ ಸಮೂಹಗಳು ಸ್ಪಷ್ಟ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ದೆಹಲಿಯಲ್ಲಿ ಎನ್‌ಡಿಎ ಒಕ್ಕೂಟಕ್ಕೆ ಸಮರ್ಥನೆ ನೀಡಬಹುದು ಅಥವಾ ಕಾಂಗ್ರೆಸ್‌ಗೆ ಸಮರ್ಥನೆ ನೀಡಬಹುದು. ಈ ಸಮೂಹಗಳಿಗೆ ಅನ್ಯ ಆಯ್ಕೆಗಳು ಇದ್ದಂತಿಲ್ಲ. ಮೋದಿ ಅವರಿಗೆ ಸಮರ್ಥನೆ

ಶೇಕಡ ೫೦ರಷ್ಟಿದ್ದರೆ, ಅದರ ಪ್ರಭಾವ ಎಲ್ಲಾ ರಾಜ್ಯಗಳಲ್ಲೂ ಕಾಣಿಸಿಗುತ್ತದೆ. ಕಡೆಯ ಮೈಲಿಗಲ್ಲು ತಲುಪುವ ದಾರಿ ತಾನಾಗೆ ಗೋಚರಿಸಿದರೂ ನನಗೆ ಆಶ್ಚರ್ಯವಾಗದು.

✵✵✵✵✵